(iii) *Re : Death of Sri Allasab in Shorapur due to alleged beating by the Police and to the Indifference of Police Superintendent and Deputy Inspector General of Police*

SRI RAJA PID NAIK (Shorapur).— Madam, I call the attention of the Chief Minister to the death of Sri Allasab in Shorapur due to alleged beating by the Police and to the indifference of Police Superintendent and the Deputy Inspector-General of Police.

SRI D. DEVARAJ URS (Chief Minister).— Madam, I wish to make the following statement :

On 17-6-1977 at about 10-30 p.m. HC 120 and PC 686 of Shorapur during the night rounds found one Allasab, s/o Khaja Sab in his sister-in-law Lalbi. quarrelling in a public place and therefore they brought them to the Police Station and produced before the Police Sub-Inspector, Shorapur. The Sub-Inspector Registered a case in Cr. No. 59/77 u/s 160 Indian Penal Code at about 11-15 p.m, and as one Marappa, s/o Mallappa came to Police Station and offered surety for the above accused, they were released on bail immediately. They were not beaten by the Police. On 18-6-1977 as accused came to the Court late, the charge-sheet against them could not be filed and therefore the Assistant Public Prosecutor Shorapur asked to file the charge-sheet on 20-6-1977 as 19-6-1977 was Sunday. In the meanwhile on 18-6-1977 in the night Allasab had stomach ache and fever, and he died on 19-6-1977 at 9-00 a.m. The dead body was kept at his house for 24 hours awaiting arrival of his wife and relatives and thereafter it was buried at Muslim Grave Yard at Shorapur according to Muslim rights after offering Janaza Namaz. The burial ceremony was attended by the relatives and neighbours and no foul play was suspected by the relatives of the deceased including his wife. Hence the body was not subjected for Post Morten Examination.

Fifth and sixth Report of the P.A.C.

PRESENTATION

SRI H. D. DEVE GOWDA (Holenarasipur).— Madam, I beg to present :

(i) Fifth Report of the Public Accounts Committee on Appropriation Accounts and Audit Reports for the years 1971-72 and 1972-73 relating to Public Works (other than Major Irrigation Projects) and Municipal Administration Department.

(ii) Sixth Report of the Public Accounts Committee on the Audit Reports for the years 1972-73, 1973 and 1974-75 (Major Irrigation Projects) relating to the Public Works Department:

MADAM SPEAKER.— The reports are presented.

Admission of a notice under Rule 146

Re : The charges Levelled by a Lok Sabha Member aginst the Health Minister

ಶ್ರೀ ಎಚ್. ಡಿ. ದೇವೇಗೌಡ.— ಮಾನ್ಯ ಅಧ್ಯಕ್ಷಣಿಯವರೇ, ಮಾನ್ಯ ಆರೋಗ್ಯ ಸಚಿವರ ಮೇಲೆ ಲೋಕಸಭಾ ಸದಸ್ಯರು ಮಾಡಿರತಕ್ಕಂಥ ಆಪಾದನೆಯ ಸಂಬಂಧದಲ್ಲಿ 146ನೇ ನಿಯಮದ ಪ್ರಕಾರ ಆ ವಿಷಯವನ್ನು ಈ ಸಭೆಯಲ್ಲಿ ಚರ್ಚೆಗೆ ತೆಗೆದುಕೊಳ್ಳುವುದರ ಮೂಲಕ ಈ ಸಭೆ ಈ ಬಗ್ಗೆ ಒಂದು ಸಮಿತಿಯನ್ನು ನೇಮಕ ಮಾಡಿ ಈ ವಿಷಯದಲ್ಲಿ ವಿಚಾರಣೆ ಮಾಡಬೇಕೆಂದು ತಮಗೆ ಒಂದು ನೋಟೀಸ್ ಕೊಟ್ಟಿದ್ದೇನೆ. ಆದರ ಬಗ್ಗೆ ಒಂದು ಸಮಿತಿಯನ್ನು ನೇಮಕ ಮಾಡಿ ಈ ವಿಷಯವನ್ನು ಇಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು,—ಮಾನ್ಯ ಮುಖ್ಯಮಂತ್ರಿಯವರು ಈ ಬಗ್ಗೆ ಸೋಮವಾರ ಹೇಳುತ್ತೇನೆ ಎಂದು ಹೇಳಿದ್ದರು. ಆದ್ದರಿಂದ ನನಗೆ ಬೇಕಾಗಿರುವುದು ಇಷ್ಟೆ, ಅವರಿಂದ ಕಾಗದ ಬಂದಿರುವುದು ನಿಜವೆ ? ಹಾಗೆ ಬಂದಪಕ್ಷದಲ್ಲಿ ಆ ಬಗ್ಗೆ ನನ್ನ ಅನುಮತಿಯನ್ನು ಕೊಡಬೇಕಾಗುತ್ತದೆ. ಅದು ನಿಜವೇ ಅಥವಾ ಇಲ್ಲವೇ ಎಂಬುದನ್ನು ಮಾನ್ಯ ಮುಖ್ಯ ಮಂತ್ರಿಗಳು ಹೇಳಬೇಕಲ್ಲ.

ಶ್ರೀ ಡಿ. ದೇವರಾಜ ಅರಸ್.— ಅವರಿಂದ ಕಾಗದ ಬಂದಿರುವುದು ನರಿ ನಾನು ಇಲ್ಲ ಎಂದು ಹೇಳುವುದಿಲ್ಲ. ಆದರೆ ಈಗ ಅನುಮತಿ ಕೊಡುವ ವಿಚಾರದಲ್ಲಿ ಒಂದೆರಡು ಮಾತನ್ನು ನಾನು ಹೇಳಬೇಕಾಗುತ್ತದೆ.

ಮಾನ್ಯ ಅಧ್ಯಕ್ಷರೆ, ನಾನು ಹೇಳುವುದು ಏನು ಎಂದರೆ ಒಟ್ಟು 16ನೇ ಚಾಪ್ಟರ್‌ನಲ್ಲಿ ಹೇಳಿರುವ ಪ್ರಕಾರ 146, 147, 148 ರಿಂದ 152ರ ವರೆಗೆ ಏನು ಇದೆ ಇದು ಪ್ರತಿಯೊಂದೂ ಮೋಷನ್ ಬಗ್ಗೆ ಯಾವುದೇ ರೀತಿ ನಡವಳಿಕೆ ಆಗಬೇಕು ಎಂದು ಉಲ್ಲೇಖವಾಗಿದೆ. ಇದರಲ್ಲಿ ಕ್ಲಾಸ್ 148 (7) ರಲ್ಲಿ it shall not anticipate discussion... .

ಶ್ರೀ ಕಾಗೋಡು ತಿಮ್ಮಪ್ಪ.— ಅವರಿಗೆ ವಕಾಲತ್ತು ವಹಿಸಲು ಆಗುತ್ತದೆಯೇ ?

ಶ್ರೀ ಡಿ. ದೇವರಾಜ್ ಅರಸ್.—ಬೇಡವೇ ?

ಶ್ರೀ ಕಾಗೋಡು ತಿಮ್ಮಪ್ಪ.—ಚರ್ಚೆ ಮಾಡಲು ಒಂದು ವಿಧಾನ ಬೇಡವೇ ?.....

ಶ್ರೀ ಡಿ. ದೇವರಾಜ್ ಅರಸ್.—ಈ ಒಂದು ಕಾರಣದಿಂದ ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ ಇದರಲ್ಲಿ ಮೋಷನ್ ಅಂತ ಇರುವುದರಿಂದ, ಅವರು ತಂದಿರತಕ್ಕ ಮೋಷನ್ ರೆಸಲೂಷನ್ ಒಳಗೆ ಬರುವುದಿಲ್ಲ ಆದ್ದರಿಂದ ಆರೋಗ್ಯ ಇರಾಖೆಯ ಮೇಲೆ ಡಿಮಾಂಡ್ ಇರುವುದರಿಂದ ಈಗ ಇದರ ಬಗ್ಗೆ ಚರ್ಚೆ ಮಾಡುವ ಅಗತ್ಯವಿಲ್ಲವೆಂದು ಹೇಳುತ್ತೇನೆ.

ಶ್ರೀ ಎಚ್. ಡಿ ದೇವೇಗೌಡ.—ಮಾನ್ಯ ಮುಖ್ಯ ಮಂತ್ರಿಗಳು ಹೇಳುವುದು ಆರೋಗ್ಯ ಇರಾಖೆಯ ಮೇಲೆ ಡಿಮಾಂಡ್ ಇರುವುದರಿಂದ ಡಿಮಾಂಡ್ ಮೇಲೆ ಮಾತನಾಡುವಾಗ ಈ ವಿಷಯ ಮಾತನಾಡಬಹುದು ಎಂದು ಹೇಳಿದ್ದಾರೆ. ಆದರೆ ನಾವು ಡಿಮಾಂಡ್ ಮೇಲೆ ಮಾತನಾಡುವಾಗ ಆ ಇರಾಖೆಗೆ ಸಂಬಂಧಪಟ್ಟ ಆದಳಿತದ ಖರ್ಚು ವೆಚ್ಚದ ಬಗ್ಗೆ ಚರ್ಚೆ ಮಾಡುತ್ತೇವೆ. ಆದ್ದರಿಂದ ಈ ಮೋಷನ್ ಇರುವುದು ಆರೋಗ್ಯ ಮಂತ್ರಿಗಳ ಮೇಲೆ ಮಾಡಿರುವ ಆಪಾದನೆಗೆ ಸಂಬಂಧಪಟ್ಟ ವಿಷಯ, ಒಬ್ಬ ಸಚಿವರ ಮೇಲೆ ಮತೊಬ್ಬ ಪಾರ್ಲಿಮೆಂಟ್ ಸದಸ್ಯರು ಆಪಾದನೆ ಮಾಡಿರುವುದರಿಂದ ಇದರ ಬಗ್ಗೆ ಈ ಸದನದ ಒಂದು ಸಮಿತಿ ಮಾಡಬೇಕೆಂದು ಹೇಳುವುದು ಇದರ